**ಸಾಕ್ಷಿಯನ್ನು ದಿಃ 03.09.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

1. ವಾಹನ ಸಂಖ್ಯೆ ಕೆಎ-12-ವಿ-8064 ವಾಹನ ನಮ್ಮ ಸಂಸ್ಥೆಯ ವಿಮೆಗೆ ಒಳಪಟ್ಟಿದೆ ಎಂದರೆ ಸಾಕ್ಷಿಯು ನಿಬಂಧನೆಗಳಿಗೆ ಒಳಪಟ್ಟು ವಿಮೆಗೆ ಒಳಪಟ್ಟಿದೆ ಎನ್ನುತ್ತಾರೆ. ಅದು ಹೊಸ ಮೋಟಾರ್ ಬೈಕ್ ಎಂದರೆ ಸರಿ. ಅಪಘಾತ ಸಮಯಕ್ಕೆ ಸದರಿ ಬೈಕ್ ಕೊಂಡು ಕೊಂಡು ಒಂದು ವರ್ಷ ಆಗಿರಲಿಲ್ಲ ಎಂದರೆ ಸರಿ. ಸದರಿ ಬೈಕ್ ಗೆ ಕಾಂಪ್ರಹೆನ್ಸೀವ್ ಪ್ಯಾಕೇಜ್ ಪಾಲಿಸಿ ( ಬಂಡಲ್ ಪಾಲಿಸಿ) ಕೊಟ್ಟಿದ್ದೇವೆ ಎಂದರೆ ಸರಿ. ಆ ವಿಮೆ ಪ್ರಕಾರ ಪಿಲಿಯನ್ ರೈಡರ್ ಗೆ ವಿಮೆ ಹೊಣೆಗಾರಿಕೆ ಇದೆ ಎಂದರೆ ಷರತ್ತು ಹಾಗೂ ನಿಬಂಧನೆಗಳು ಉಲ್ಲಂಘನೆ ಆಗದೇ ಇದ್ದರೆ ವಿಮೆ ಹೊಣೆಗಾರಿಕೆ ಇದೆ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಈ ಪ್ರಕರಣದಲ್ಲಿ ನಿಬಂಧನೆಗಳ ಉಲ್ಲಂಘನೆ ಆಗಿದೆ ಎನ್ನುತ್ತಾರೆ.

2. ಅಪಘಾತ ಮೈಸೂರು ಹುಣಸೂರು ರಸ್ತೆಯಲ್ಲಿ ಮಧ್ಯರಾತ್ರಿ 01.00 ಗಂಟೆಗೆ ಆಗಿದೆ ಎಂದರೆ ಪೋಲೀಸ್ ದಾಖಲೆಗಳ ಪ್ರಕಾರ ಸರಿ ಎನ್ನುತ್ತಾರೆ. ಆದ ಕಾರಣ ಅಪಘಾತ ಪ್ರತ್ಯಕ್ಷ ಸಾಕ್ಷಿದಾರರು ಯಾರು ಇಲ್ಲ ಎಂದರೆ ಸರಿ. ಅಪಘಾತದಲ್ಲಿ ರೈಡರ್ ಹಾಗೂ ಪಿಲಿಯಲ್ ರೈಡರ್ ಇಬ್ಬರು ಮೃತಪಟ್ಟಿದ್ದಾರೆ ಎಂದರೆ ಸರಿ. ಅಪಘಾತದ ಬಗ್ಗೆ ನನ್ನ ಮಾಹಿತಿ ಪ್ರಕಾರ ಇದು ಒಂದೇ ಕ್ಲೈಮ್ ಇದೆ. ಮೋಟಾರ್ ಬೈಕ್ ಅನ್ನು ಇಬ್ಬರು ಚಲಾಯಿಸಲು ಆಗುವುದಿಲ್ಲ ಎಂದರೆ ಸರಿ. ಮೋಟಾರ್ ಬೈಕ್ ಅನ್ನು 1 ನೇ ಎದುರುದಾರರು ಯಾರಿಗೆ ಕೊಟ್ಟಿದ್ದರು ಎಂದು ತಿಳಿದುಕೊಂಡಿದ್ದೀರಾ ಎಂದರೆ ಆ ಬಗ್ಗೆ ಮಾಹಿತಿ ಇಲ್ಲ. ಈ ಬಗ್ಗೆ ನಾವು ತನಿಖೆ ಮಾಡಿಲ್ಲ. ಆಂತರಿಕ ತನಿಖೆ ಮಾಡಿ ತಿಳಿದುಕೊಳ್ಳಲು ತೊಂದರೆ ಇಲ್ಲ. ಮೋಟಾರ್ ಬೈಕ್ ಅನ್ನು ಯಾರಿಗೆ ಕೊಟ್ಟಿದ್ದಾರೆ ಎಂಬ ಮಾಹಿತಿ ಅದರ ಮಾಲೀಕರಿಗಷ್ಟೇ ತಿಳಿದಿದೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

3. ಮೋಟಾರ್ ಸವಾರನಿಗೆ ವಾಹನ ಚಾಲನ ಪರವಾನಗಿ ಇತ್ತು ಎಂದರೆ ಸರಿಯಲ್ಲ. ವಿಮೆ ಇತ್ತು ಎಂದರೆ ಸರಿ. ಚಾಲನ ಪರವಾನಗಿ ಇಲ್ಲ ಎಂದು ದೊಷರೋಪಣಾ ಪಟ್ಟಿಯಲ್ಲಿ ನಮೂದಾಗಿದೆ.

ಯಾವ ರೀತಿಯ ಡಿ.ಎಲ್ ಇತ್ತು ಎಂಬುದನ್ನು ತಿಳಿದುಕೊಂಡಿದ್ದೀರಾ ಎಂದರೆ ದೋಷರೋಪಣಾ ಪಟ್ಟಿಯಲ್ಲಿ ಚಾಲನ ಪರವಾನಗಿ ಇಲ್ಲ ಎಂದು ನಮೂದಿಸಿರುವ ಕಾರಣ ತಿಳಿದುಕೊಂಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸವಾರನಾದ ಪ್ರಸನ್ನ ಎನ್ನುವವರಿಗೆ ಚಾಲನ ಪರವಾನಗಿ ಇದ್ದರೂ ಸಹ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೋಷರೋಪಣಾ ಪಟ್ಟಿಯಲ್ಲಿ ಮೋಟಾರ್ ಸೈಕಲ್ ಅನ್ನು ಪಿಲಿಯನ್ ರೈಡರ್ ಚಲಾಯಿಸುತ್ತಿದ್ದರು ಎಂದು ಬರೆದಿಲ್ಲ ಎಂದರೆ ಸಾಕ್ಷಿಯು ಯಾರು ಚಲಾಯಿಸುತ್ತಿದ್ದರು ಎಂದು ಸಹ ಬರೆದಿಲ್ಲ, ಹಾಗೂ ಇಬ್ಬರಿಗೂ ಡಿ.ಎಲ್ ಇಲ್ಲ ಎಂದು ಬರೆದಿದ್ದಾರೆ ಎಂದು ಉತ್ತರಿಸಿರುತ್ತಾರೆ. ಅಪಘಾತದ ಬಗ್ಗೆ ಸರಿಯಾಗಿ ತಿಳಿದುಕೊಳ್ಳದೇ, ಅರ್ಜಿದಾರರಿಗೆ ಪರಿಹಾರ ಕೊಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ ಎಂ.ಬಿ.ಜಿ ವಕೀಲರಿಂದಃ**

ಅಪಘಾತದ ಬಗ್ಗೆ ನಮ್ಮ ಕಂಪನಿಯ ಕಡೆಯಿಂದ ಪ್ರತ್ಯೇಕ ತನಿಖೆ ಮಾಡಿಲ್ಲ. ನಾನು ಪೋಲೀಸ್ ದಾಖಲೆಗಳ ಆಧಾರದ ಮೇಲೆ ಈ ದಿನ ಸಾಕ್ಷ್ಯ ನುಡಿಯುತ್ತಿದ್ದೇನೆ. ಅಪಘಾತದ ಬಗ್ಗೆ ವಾಹನ ಮಾಲೀಕರನ್ನು ಖುದ್ದು ಬೇಟಿ ಮಾಡಿ ಮಾಹಿತಿ ಪಡೆಯಲು ತೊಂದರೆ ಇರಲಿಲ್ಲ. ವಾಹನದ ಮಾಲೀಕರು ನಮಗೆ ಬರವಣಿಗೆಯಲ್ಲಿ ಯಾರಿಗೆ ಅವರ ವಾಹನವನ್ನು ಕೊಟ್ಟಿದ್ದರು ಹಾಗೂ ಅವರಿಗೆ ಡಿ.ಎಲ್ ಇತ್ತೋ ಇಲ್ಲವೋ ಎಂಬ ಬಗ್ಗೆ ನಮಗೆ ಬರವಣಿಗೆಯಲ್ಲಿ ಏನನ್ನು ಕೊಟ್ಟಿಲ್ಲ. ಪೋಲೀಸರಿಂದ ಯಾವ ಕಾರಣಕ್ಕಾಗಿ ಡಿ.ಎಲ್ ಇರಲಿಲ್ಲ ಎಂದು ನಾವು ಮಾಹಿತಿ ಪಡೆದುಕೊಂಡಿರುವುದಿಲ್ಲ. ಬೈಕ್ ಸವಾರ ಹಾಗೂ ಸಹ ಸವಾರನಿಗೆ ಡಿ.ಎಲ್ ಇಲ್ಲ ಎಂಬ ಬಗ್ಗೆ ನಾವು ದಾಖ್ಲೆ ಹಾಜರುಪಡಿಸಿರುವುದಿಲ್ಲ. ಆರ್.ಟಿ.ಓ ದಿಂದ ಸಹ ದಾಖಲೆ ಸಂಗ್ರಹಿಸಿ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ಪೋಲೀಸ್ ದಾಖಲೆಗಳಲ್ಲಿ ಇರುವ ಕಾರಣ ಹಾಜರುಪಡಿಸಿರುವುದಿಲ್ಲ

ಎಂದು ಉತ್ತರಿಸಿರುತ್ತಾರೆ. ಮೋಟಾರ್ ಸೈಕಲ್ ಸವಾರನಿಗೆ ಡಿ.ಎಲ್ ಇದ್ದರೂ ಸಹ ಇರಲಿಲ್ಲ ಎಂದು ಭಾಧ್ಯತೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.